ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 250 ಎಂಎನ್‌ವೈ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 30-08-2023

**ಇವರಿಂದ,**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

**"ಅತೀ ಜರೂರು"**
**"ನ್ಯಾಯಾಲಯ ಪ್ರಕರಣ"**

**ಇವರಿಗೆ,**
ನಿರ್ದೇಶಕರು,
ಭಾಷಾಂತರ ನಿರ್ದೇಶನಾಲಯ,
ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.

**ಮಾನ್ಯರೇ,**

**ವಿಷಯ:** ರಿಟ್ ಅರ್ಜಿ ಸಂಖ್ಯೆ: 38401/2014 ಮತ್ತು C/W 11044/2018, 20652/2018, 3052/2019, 29107/2019 ಸಿಟಿಜನ್ಸ್ ಆಕ್ಷನ್ ಗ್ರೂಪ್, ಬೆಂಗಳೂರು ವಿರುದ್ಧ ರಾಜ್ಯ ಸರ್ಕಾರ ಮತ್ತಿತರರು.

**ಉಲ್ಲೇಖ:** 1) ಸರ್ಕಾರದ ಆದೇಶ ಸಂಖ್ಯೆ: ನಅಇ 250 ಎಂಎನ್‌ವೈ 2018 (ಭಾಗ-3), ದಿನಾಂಕ: 28-08-2023 (1).
2) ಸರ್ಕಾರದ ಆದೇಶ ಸಂಖ್ಯೆ: ನಅಇ 250 ಎಂಎನ್‌ವೈ 2018 (ಭಾಗ-3), ದಿನಾಂಕ: 28-08-2023 (2).

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ಮತ್ತು (2) ರಲ್ಲಿನ ನ್ಯಾಯಾಲಯ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 38401/2014 ಮತ್ತು C/W 11044/2018, 20652/2018, 3052/2019, 29107/2019 ಸಿಟಿಜನ್ಸ್ ಆಕ್ಷನ್ ಗ್ರೂಪ್, ಬೆಂಗಳೂರು ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು ಪ್ರಕರಣಗಳಲ್ಲಿ ದಿನಾಂಕ: 21-07-2023 ಮತ್ತು 01-08-2023 ರಂದು ನೀಡಿರುವ ನಿರ್ದೇಶನಗಳಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಮತ್ತು ದ್ವಿತೀಯ ರಾಜಕಾಲುವೆಗಳ ರಕ್ಷಣೆ ಮತ್ತು ಸದರಿ ಒತ್ತುವರಿಯನ್ನು ತೆರವುಗೊಳಿಸಲು ಸಕ್ಷಮ ಪ್ರಾಧಿಕಾರ / ಗೊತ್ತುಪಡಿಸಿದ ಅಧಿಕಾರಿಗಳನ್ನು ಅಧಿಕೃತಗೊಳಿಸಿ ಆದೇಶಿಸಲಾಗಿರುವ ವಿಷಯಕ್ಕೆ ಸಂಬಂಧಿಸಿದ ಆದೇಶಗಳ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿದೆ.

ಈ ಮೇಲೆ ಹೇಳಿದ ಪ್ರಕರಣವು ದಿನಾಂಕ: 04-09-2023 ರಂದು ವಿಚಾರಣೆಗೆ ಬರಲಿರುವುದರಿಂದ ಸದರಿ ದಿನಾಂಕದೊಳಗಾಗಿ ಮಾನ್ಯ ನ್ಯಾಯಾಲಯದಲ್ಲಿ ಆಫಿಡವಿಟ್ ಸಲ್ಲಿಸಬೇಕಾಗಿರುವುದರಿಂದ ಈ ಪತ್ರದೊಂದಿಗೆ ಲಗತ್ತಿಸಿರುವ ಆದೇಶದ ಪ್ರತಿಗಳನ್ನು **ಆದ್ಯತೆಯ ಮೇಲೆ ಕನ್ನಡ ಭಾಷೆಯಿಂದ ಆಂಗ್ಲ ಭಾಷೆಗೆ ಭಾಷಾಂತರ ಮಾಡಿ ಕೊಡುವಂತೆ** ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಲಕ್ಷ್ಮೀಸಾಗರ್ ಎನ್.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 38401/2014 C/W ರಿಟ್ ಅರ್ಜಿ ಸಂಖ್ಯೆ: 11044/2018 (LB-RES)PIL ಮತ್ತು ಇತರೆ ಪ್ರಕರಣಗಳಲ್ಲಿ ದಿನಾಂಕ: 21-07-2023 ಮತ್ತು 01-08-2023 ರಂದು ನೀಡಿರುವ ನಿರ್ದೇಶನಗಳಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಾಜಕಾಲುವೆಗಳ ರಕ್ಷಣೆ ಮತ್ತು ಸದರಿ ಒತ್ತುವರಿಯನ್ನು ತೆರವುಗೊಳಿಸಲು ಸಕ್ಷಮ ಪ್ರಾಧಿಕಾರ / ಗೊತ್ತುಪಡಿಸಿದ ಅಧಿಕಾರಿಗಳನ್ನು ಅಧಿಕೃತಗೊಳಿಸಿ ಆದೇಶ ಹೊರಡಿಸುವ ಬಗ್ಗೆ.

**ಓದಲಾಗಿದೆ:**

1. ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 38401/2014 C/W ರಿಟ್ ಅರ್ಜಿ ಸಂಖ್ಯೆ: 11044/2018 (LB-RES)PIL ರ ಪ್ರಕರಣಗಳಲ್ಲಿ ಮತ್ತು ಇತರೆ ಪ್ರಕರಣಗಳಲ್ಲಿ ದಿನಾಂಕ:21-07-2023 ಮತ್ತು 01-08-2023 ರಂದು ನೀಡಿರುವ ದೈನಂದಿನ ಆದೇಶ / ನಿರ್ದೇಶನ.
2. ಮುಖ್ಯ ಆಯುಕ್ತರು, ಬಿಬಿಎಂಪಿ ರವರ ಪತ್ರ ಸಂಖ್ಯೆ: BBMP/CC/PR/112/2023-24, ದಿನಾಂಕ: 09-08-2023.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಕೆರೆಗಳು ಮತ್ತು ರಾಜಕಾಲುವೆಗಳ ರಕ್ಷಣೆ ಮತ್ತು ಒತ್ತುವರಿಯನ್ನು ತಡೆಯುವ ಬಗ್ಗೆ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ, ರಿಟ್ ಅರ್ಜಿ ಸಂಖ್ಯೆ: 38401/2014 C/W ರಿಟ್ ಅರ್ಜಿ ಸಂಖ್ಯೆ: 11044/2018 (LB-RES-PIL) ರ ಜೆ.ಪಿ. ನಗರ 4ನೇ ಹಂತ, ಡಾಲರ್ಸ್ ಲೇಔಟ್ ರೆಸಿಡೆಂಟ್ಸ್ ಅಸೋಸಿಯೇಷನ್ಸ್ ಮತ್ತು ಇತರರ ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು ಪ್ರಕರಣಗಳನ್ನು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 21-07-2023 ಮತ್ತು ದಿನಾಂಕ: 01-08-2023 ರಂದು ವಿಚಾರಣೆಯನ್ನು ನಡೆಸಿ ಮಾನ್ಯ ಉಚ್ಚ ನ್ಯಾಯಾಲಯವು ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಿರುತ್ತದೆ.

**ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 01-08-2023 ರಂದು ನೀಡಿರುವ ದೈನಂದಿನ ಆದೇಶದ ಉದ್ಧೃತ ಭಾಗ ಈ ಕೆಳಕಂಡಂತಿದೆ:**

14. Needless to state that the action plan/report as proposed by this court be prepared in coordination with all the stake holders referred to above. For such action plan/report, stake holders may take appropriate assistance from District Lake Protection Authority. We further make it clear that State Government may

..2/-

also take immediate steps for issuing notification for appointment of the Designated officers under the KTCDA Act or BBMP Act as the case may be wherever it is required and not done till date.

ಈ ಹಿನ್ನೆಲೆಯಲ್ಲಿ, ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ: 09-08-2023ರ ಪತ್ರದಲ್ಲಿ ಮುಖ್ಯ ಆಯುಕ್ತರು, ಬಿಬಿಎಂಪಿ ರವರು, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ: 38401/2014 ಮತ್ತು C/W 11044/2018, 20652/2018, 3052/2019, 29107/2019 ಸಿಟಿಜನ್ಸ್ ಆಕ್ಷನ್ ಗ್ರೂಪ್, ಬೆಂಗಳೂರು ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 21-07-2023 ಮತ್ತು 01-08-2023 ರಂದು ನೀಡಿರುವ ದೈನಂದಿನ ಆದೇಶಗಳಲ್ಲಿ ಪಾಲಿಕೆ ವ್ಯಾಪ್ತಿಯ ಕೆರೆಗಳು ಮತ್ತು ಬೃಹತ್ ಮಳೆನೀರುಗಾಲುವೆಗಳನ್ನು / ರಾಜಕಾಲುವೆಗಳನ್ನು ಅತಿಕ್ರಮಣ ಮಾಡುವುದನ್ನು ತಡೆಯಲು ಸಮಗ್ರ ವರದಿಯನ್ನು ಸಿದ್ದಪಡಿಸುವಂತೆ ಆದೇಶಿಸಿರುತ್ತದೆ ಎಂದು ತಿಳಿಸಿರುತ್ತಾರೆ.

ಅದರಂತೆ, ಬಿಬಿಎಂಪಿ ವತಿಯಿಂದ, 1986ರ ಶ್ರೀ ಲಕ್ಷ್ಮಣರಾವ್ ಸಮಿತಿ ಹಾಗೂ 2011ರ ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್ ಸಮಿತಿಯ ಶಿಫಾರಸ್ಸನ್ನು ಒಳಗೊಂಡಂತೆ EMPRI ಸಂಸ್ಥೆಯ ವೈಜ್ಞಾನಿಕ ವರದಿ ಹಾಗೂ EMPRI ಸಂಸ್ಥೆಯ ವರದಿಗಳನ್ನು ಆಧರಿಸಿ, ಒಂದು ಸಮಗ್ರ ವರದಿಯನ್ನು ಅಫಿಡವಿಟ್ ರೂಪದಲ್ಲಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು. ಮುಂದುವರೆದು, ಸದರಿ ಅಫಿಡವಿಟ್‌ನಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಕೆರೆಗಳು ಮತ್ತು ಮಳೆ ನೀರುಗಾಲುವೆಗಳ ಒತ್ತುವರಿಯನ್ನು ತಡೆಗಟ್ಟಲು KTCDA ಸಂಸ್ಥೆಯು ಸಂಬಂಧಪಟ್ಟ ಕೆರೆಗಳಿಗೆ ಸಂಬಂಧಿಸಿದಂತೆ Designated Officers ಗಳನ್ನು ನೇಮಕ ಮಾಡಲು ದಿನಾಂಕ: 17-10-2022 ರಲ್ಲಿ ಆದೇಶ/ಅಧಿಸೂಚನೆ ಹೊರಡಿಸಲಾಗಿರುವುದನ್ನು ಮಾನ್ಯ ನ್ಯಾಯಾಲಯದ ಗಮನಕ್ಕೆ ತರಲಾಗಿದೆ. ಅಲ್ಲದೇ ಮಳೆನೀರುಗಾಲುವೆಗಳ ಒತ್ತುವರಿ ತೆರವುಗೊಳಿಸುವುದಕ್ಕೆ ಸಂಬಂಧಿಸಿದಂತೆಯೂ ಮಾನ್ಯ ನ್ಯಾಯಾಲಯದ ಗಮನಕ್ಕೆ ತರಲಾಗಿದೆ. ಸದರಿ ಅಫಿಡವಿಟ್ ಅನ್ನು ಮಾನ್ಯ ಉಚ್ಚ ನ್ಯಾಯಾಲಯವು ಒಪ್ಪಿದ್ದು, ದಿನಾಂಕ: 01-08-2023ರ ಆದೇಶದಲ್ಲಿ ಪ್ರಾಥಮಿಕ ಮತ್ತು ದ್ವಿತೀಯ ಮಳೆನೀರುಗಾಲುವೆಗಳ ಒತ್ತುವರಿ ತೆರವುಗೊಳಿಸಲು ಬಿಬಿಎಂಪಿ ಕಾಯ್ದೆ ಹಾಗೂ ಕೆಟಿಸಿಡಿಎ ಕಾಯ್ದೆಯನ್ವಯ ಅಧಿಸೂಚನೆಯನ್ನು ಹೊರಡಿಸುವಂತೆ ಆದೇಶಿಸಿರುತ್ತದೆ ಎಂದು ಮುಖ್ಯ ಆಯುಕ್ತರು, ಬಿಬಿಎಂಪಿ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಜವಾಬ್ದಾರಿ / ಅಂಶಗಳಿಗೆ ಸಂಬಂಧಿಸಿದಂತೆ ಆದೇಶ ಹೊರಡಿಸಬೇಕಾಗಿರುತ್ತದೆ ಎಂದು ಮುಖ್ಯ ಆಯುಕ್ತರು ತಿಳಿಸಿರುತ್ತಾರೆ.

1. Officers for Protection and reporting encroachments.
2. Officers responsible to execute an order being passed by the Tahsildar.

3. Officers for filing complaints in the Land Grabbing Court (LGC).

ಮುಂದುವರೆದು, ಈ ರೀತಿ ಅಧಿಕೃತಗೊಳಿಸಲಾಗಿರುವ ಅಧಿಕಾರಿಗಳು ಸದರಿ ರಾಜಕಾಲುವೆಗಳು ಮತ್ತು ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲು, ನಿಯಂತ್ರಿಸಲು ತಪ್ಪಿದ್ದಲ್ಲಿ ಸದರಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮವನ್ನು ಕೈಗೊಳ್ಳಲು ಉದ್ದೇಶಿಸಲಾಗಿರುವುದನ್ನು ಸಹ ಮಾನ್ಯ ಉಚ್ಚ ನ್ಯಾಯಾಲಯದ ಗಮನಕ್ಕೆ ತರಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಮತ್ತು ದ್ವಿತೀಯ ಹಂತದ ರಾಜಕಾಲುವೆಗಳಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರ / ಅಧಿಕೃತಗೊಳಿಸಿದ ಅಧಿಕಾರಿಗಳ ವಿವರವನ್ನು ಅನುಬಂಧ-1 ರಲ್ಲಿ ಹಾಗೂ ಕೆರೆಗಳ ಸಂರಕ್ಷಣೆ ಮತ್ತು ಕೆರೆ ಭೂಮಿಗಳಿಗೆ ಸಂಬಂಧಿಸಿದಂತೆ ಈ ರೀತಿಯ ಸಕ್ಷಮ ಪ್ರಾಧಿಕಾರ / ಅಧಿಕೃತಗೊಳಿಸಿದ ಅಧಿಕಾರಿಗಳ ವಿವರವನ್ನು ಅನುಬಂಧ-2 ರಲ್ಲಿ ಸಲ್ಲಿಸುತ್ತಾ, ಮಾನ್ಯ ಉಚ್ಛ ನ್ಯಾಯಾಲಯವು ಆದೇಶಿಸಿರುವಂತೆ, ಕೆರೆಗಳು ಮತ್ತು ಪ್ರಾಥಮಿಕ ಮತ್ತು ದ್ವಿತೀಯ ರಾಜಕಾಲುವೆಗಳ ರಕ್ಷಣೆ ಮತ್ತು ಒತ್ತುವರಿ ತೆರವುಗೊಳಿಸಲು ಸಕ್ಷಮ ಪ್ರಾಧಿಕಾರ / ಅಧಿಕೃತಗೊಳಿಸಿದ ಅಧಿಕಾರಿಗಳನ್ನು ನೇಮಕ ಮಾಡಿ ಆದೇಶ ಹೊರಡಿಸುವಂತೆ ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಕೋರಿರುತ್ತಾರೆ.

ಕರ್ನಾಟಕ ಭೂ ಕಂದಾಯ ಅಧಿನಿಯಮ 1967ರ ನಿಯಮ 67 ರನ್ವಯ ಕಂದಾಯ ಇಲಾಖೆಯ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಹಾಗೂ ಮುಖ್ಯ ಅಭಿಯಂತರರು, ಬೃಹತ್ ಮಳೆನೀರುಗಾಲುವೆ ರವರ ಅಧೀನದಲ್ಲಿ ನಿರ್ವಹಿಸುತ್ತಿರುವ ಪ್ರಾಥಮಿಕ ಮತ್ತು ದ್ವಿತೀಯ ರಾಜಕಾಲುವೆಗಳ ರಕ್ಷಣೆ ಮಾಡುವ ಮತ್ತು ಒತ್ತುವರಿಯನ್ನು ತಡೆಯಲು ಈ ಕೆಳಕಂಡಂತೆ ಸಕ್ಷಮ ಪ್ರಾಧಿಕಾರ / ಅಧಿಕೃತಗೊಳಿಸಿದ ಅಧಿಕಾರಿಗಳನ್ನು ನೇಮಕ ಮಾಡಲು ಕೋರಿರುತ್ತಾರೆ.

**ಪ್ರಾಥಮಿಕ ಮತ್ತು ದ್ವಿತೀಯ ರಾಜಕಾಲುವೆಗಳ ರಕ್ಷಣೆ ಮತ್ತು ಒತ್ತುವರಿ ತೆರವು:**

**1. ದೂರು ನೀಡುವ ಪ್ರಾಧಿಕಾರ (Complaining Authority):** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರಾಥಮಿಕ ಮತ್ತು ದ್ವಿತೀಯ ಹಂತದ ರಾಜಕಾಲುವೆಗಳ ಪ್ರತಿಯೊಂದು ನಿರ್ದಿಷ್ಟ ಪರಿಮಿತಿಗೆ ಸಂಬಂಧಿಸಿದಂತೆ, ರಾಜಕಾಲುವೆಗಳ ಎಲ್ಲೆಗಳನ್ನು ರಕ್ಷಿಸುವ ಪ್ರಾಧಿಕಾರ ಇರಬೇಕಾಗಿರುತ್ತದೆ. ಈ ನಿರ್ದಿಷ್ಟ ರಾಜಕಾಲುವೆಗಳ ಪರಿಮಿತಿಯೊಳಗೆ ಕಂಡು ಬರುವ ಯಾವುದೇ ಒತ್ತುವರಿ / ಅತಿಕ್ರಮಣಗಳನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ನಿಯಮ ಕಲಂ 104 ರಡಿ ನೇಮಿಸಲ್ಪಟ್ಟ ಕಂದಾಯ ಪ್ರಾಧಿಕಾರಿಗೆ ವರದಿಸುವುದು ಅಂತಹ ಬಿಬಿಎಂಪಿ ಪ್ರಾಧಿಕಾರದ ಆದ್ಯ ಮತ್ತು ಕಡ್ಡಾಯ ಕರ್ತವ್ಯವಾಗಿರುತ್ತದೆ.

ಬಿಬಿಎಂಪಿ ವ್ಯಾಪ್ತಿಯ ಪ್ರಾಥಮಿಕ ಮತ್ತು ದ್ವಿತೀಯ ರಾಜಕಾಲುವೆಗಳನ್ನು ನಿರ್ವಹಿಸುವ ಬೃಹತ್ ನೀರುಗಾಲುವೆ ವಿಭಾಗದ ಕಾರ್ಯಪಾಲಕ ಅಭಿಯಂತರರು ಆಯಾ ವ್ಯಾಪ್ತಿಯ ಅತಿಕ್ರಮಣಗಳನ್ನು ಸಂಬಂಧಿಸಿದಂತೆ ಮೇಲೆ ತಿಳಿಸಿದ ಕಂದಾಯ ಪ್ರಾಧಿಕಾರಗಳಿಗೆ ದೂರು ಸಲ್ಲಿಸುವ ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.

ಅದರಂತೆ ಆಯಾ ಬೃಹತ್ ನೀರುಗಾಲುವೆ ವ್ಯಾಪ್ತಿಯ ಕಾರ್ಯಪಾಲಕ ಅಭಿಯಂತರರುಗಳನ್ನು ದೂರು ನೀಡುವ ಪ್ರಾಧಿಕಾರಿ ಎಂದು ಈ ಮೂಲಕ ಅಧಿಸೂಚಿಸಿದೆ.

**2. ಆದೇಶವನ್ನು ಹೊರಡಿಸಲು ಸಕ್ಷಮವಾದ ಅಧಿಕಾರಿ (Officer responsible for passing order):** ಕರ್ನಾಟಕ ಭೂ ಕಂದಾಯ ಕಾಯ್ದೆ ಅಧಿನಿಯಮ 1964ರ ನಿಯಮ 104 ರನ್ವಯ ಆಯಾ ಕಂದಾಯ ತಾಲ್ಲೂಕು ವ್ಯಾಪ್ತಿಗಳ ತಹಶೀಲ್ದಾರರು, ಒತ್ತುವರಿ ದೂರು ಸ್ವೀಕರಿಸುವ, ವಿಚಾರಣೆ ನಡೆಸುವ ಮತ್ತು ಆದೇಶ ಹೊರಡಿಸುವ ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.

3. **ಅಳತೆ (ಸರ್ವೆ) ಮತ್ತು ಗಡಿ (ಎಲ್ಲೆ) ಗುರುತಿಸಲು ಸಕ್ಷಮವಾದ ಅಧಿಕಾರಿ / ಪ್ರಾಧಿಕಾರ (Officer responsible for Survey and Marking):** ದೂರು ಸ್ವೀಕರಿಸಿದ ತರುವಾಯ ಸಂಬಂಧಿಸಿದ ತಹಶೀಲ್ದಾರನು, ಆ ತಾಲ್ಲೂಕಿನ ವ್ಯಾಪ್ತಿಯ ಭೂ ದಾಖಲೆಗಳ ಸಹಾಯಕ ನಿರ್ದೇಶಕನಿಗೆ ಆ ದೂರಿಗೆ ಸಂಬಂಧಿಸಿದ ಸ್ಪಷ್ಟ ಒತ್ತುವರಿ / ಅತಿಕ್ರಮಣಗಳ ವಿವರಗಳನ್ನೊಳಗೊಂಡ ಒಂದು ಅಳತೆ (ಸರ್ವೆ) ಮತ್ತು ಗಡಿ ಗುರುತು ವಿವರಗಳನ್ನೊಳಗೊಂಡ ವರದಿ ನೀಡಲು ನಿರ್ದೇಶನ ನೀಡುವುದು. ತಹಶೀಲ್ದಾರರವರ ನಿರ್ದೇಶನದ ಮೇರೆಗೆ ಆಯಾ ಕಂದಾಯ ತಾಲ್ಲೂಕು ವ್ಯಾಪ್ತಿಯ ಭೂ ದಾಖಲೆಗಳ ಸಹಾಯಕ ನಿರ್ದೇಶಕರನ್ನು ಅಳತೆ (ಸರ್ವೆ) ಮತ್ತು ಗಡಿ ಗುರುತಿಸುವ ಪ್ರಾಧಿಕಾರಿ / ಅಧಿಕಾರಿಯನ್ನಾಗಿ ಅಧಿಸೂಚಿಸಿದೆ.

**4. ಭೌತಿಕ ಒತ್ತುವರಿ ತೆರವಿಗೆ ಜವಾಬ್ದಾರರಾದ ಅಧಿಕಾರಿ / ಪ್ರಾಧಿಕಾರ (The Authority responsible for Physical Removal):** ಕರ್ನಾಟಕ ಭೂ ಕಂದಾಯ ಕಾಯಿದೆ ಪ್ರಕರಣ 104 ರನ್ವಯ ಆದೇಶವನ್ನು ಹೊರಡಿಸಿದ ನಂತರ ಸಂಬಂಧಪಟ್ಟ ತಹಶೀಲ್ದಾರರವರು ಬಿಬಿಎಂಪಿಗೆ ಒತ್ತುವರಿಯನ್ನು ತೆರವುಗೊಳಿಸಲು ನಿರ್ದೇಶನ ನೀಡಬೇಕು. ಸದರಿ ಆದೇಶದನ್ವಯ ಬೃಹತ್ ನೀರುಗಾಲುವೆ ಒತ್ತುವರಿಯಾಗಿರುವ ಸ್ಥಳಕ್ಕೆ ಸಂಬಂಧಿಸಿದ ವ್ಯಾಪ್ತಿಯಲ್ಲಿ ಬರುವ ಕಾರ್ಯಪಾಲಕ ಅಭಿಯಂತರರು ಸದರಿ ಒತ್ತುವರಿಯನ್ನು ತೆರವುಗೊಳಿಸಲು ಜವಾಬ್ದಾರರಾಗಿರುತ್ತಾರೆ.(ಕಾರ್ಯಪಾಲಕ ಅಭಿಯಂತರರು ಎಂದರೆ ನೀರುಗಾಲುವೆ ಒತ್ತುವರಿಯಗಿರುವ ವಿಭಾಗದ ಕಾರ್ಯಪಾಲಕ ಅಭಿಯಂತರರಾಗಿದ್ದು, ಬೃಹತ್ ನೀರುಗಾಲುವೆ ವಿಭಾಗದ ಕಾರ್ಯಪಾಲಕ ಅಭಿಯಂತರರುಗಳು ಅಲ್ಲ.) ಈ ಒತ್ತುವರಿಯನ್ನು ತೆರವುಗೊಳಿಸುವ ಸಂದರ್ಭದಲ್ಲಿ ಸರ್ವೆಯರ್‌ನ್ನು ಒಳಗೊಂಡಂತೆ ಕಂದಾಯ ಅಧಿಕಾರಿಗಳು (ಕಂದಾಯ ಇಲಾಖೆಯ) (ಬಿಬಿಎಂಪಿಯ ಕಂದಾಯ ಅಲ್ಲ) ಹಾಜರಿರುವುದನ್ನು ತಹಶೀಲ್ದಾರ್‌ರವರು ಖಚಿತಪಡಿಸಿಕೊಳ್ಳಬೇಕು.

**5. ಕರ್ನಾಟಕ ಭೂ ಕಬಳಿಕೆ ಪ್ರತಿಬಂಧಕ ಕಾಯ್ದೆ 9 ರನ್ವಯ ದೂರು ದಾಖಲಿಸಲು ಸಕ್ಷಮವಾದ ಪ್ರಾಧಿಕಾರ (Authorities to file case under Section 9 of Karnataka Land Grabbin Prohibition Act):**

ಸಂಬಂಧಪಟ್ಟ ತಹಶೀಲ್ದಾರ್‌ರವರು ಕಂದಾಯ ಇಲಾಖೆ ವ್ಯಾಪ್ತಿಗೊಳಪಡುವ ಬೃಹತ್ ನೀರುಗಾಲುವೆ ಸ್ಥಳವನ್ನು ಒತ್ತುವರಿ ಮಾಡಿಕೊಂಡಿರುವುದನ್ನು ತೆರವುಗೊಳಿಸುವ ಸಂಬಂಧ ಆದೇಶ ಹೊರಡಿಸಿರುವುದರಿಂದ

ಸದರಿ ತಹಶೀಲ್ದಾರ್‌ರವರೇ ಈ ಸಂಬಂಧ ಕರ್ನಾಟಕ ಭೂ ಕಬಳಿಕೆ ಪ್ರತಿಬಂಧಕ ಕಾಯ್ದೆಯ ಪ್ರಕರಣ–9 ರನ್ವಯ ದೂರು ದಾಖಲಿಸಬೇಕು. ಒಂದು ವೇಳೆ, ದೂರು ದಾಖಲಿಸಲು ವಿಫಲರಾದರೆ, ಸದರಿ ಕ್ರಮವನ್ನು ಕರ್ತವ್ಯ ನಿರ್ಲಕ್ಷ್ಯವೆಂದು ಪರಿಗಣಿಸಿ ಶಿಸ್ತು ಕ್ರಮ ಜರುಗಿಸುವುದು.

**6. ಬೃಹತ್ ನೀರುಗಾಲುವೆಗಳ ಒತ್ತುವರಿಯನ್ನು ತೆರವುಗೊಳಿಸಿದ ನಂತರ ಸದರಿ ಕಾಲುವೆಯ ಮೇಲ್ವಿಚಾರಣೆ ಮತ್ತು ಸಂರಕ್ಷಣೆ (Maintenance and preservation of Storm Water Drains boundaries post removal0 of encroachments):**

ಒತ್ತುವರಿ ತೆರವುಗೊಂಡ ನಂತರ ಸದರಿ ಬೃಹತ್ ನೀರುಗಾಲುವೆ ಹಾದುಹೋಗುವ ವ್ಯಾಪ್ತಿಯ ಬೃಹತ್ ನೀರುಗಾಲುವೆ ವಿಭಾಗದ ಕಾರ್ಯಪಾಲಕ ಅಭಿಯಂತರರು ಈ ನೀರುಗಾಲುವೆಯಲ್ಲಿ ಮಳೆ ನೀರು ಸರಾಗವಾಗಿ ಹರಿಯುವಂತೆ ನೋಡಿಕೊಳ್ಳುವ ಮತ್ತು ಅಭಿವೃದ್ಧಿ ಕೈಗೊಂಡು ನಿರ್ವಹಣೆ ಮಾಡುವುದರಿಂದ ಮತ್ತೆ ಯಾವುದೇ ರೀತಿಯ ಒತ್ತುವರಿಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯುಳ್ಳ ಅಧಿಕಾರಿ ಇವರೇ ಆಗಿರುತ್ತಾರೆ.

**7. ರಕ್ಷಣೆ / ಭದ್ರತೆ ನೀಡುವ ಪ್ರಾಧಿಕಾರ (Authority to provide protection):** ಬೃಹತ್ ನೀರುಗಾಲುವೆ ಒತ್ತುವರಿ ತೆರವುಗೊಳಿಸುವ ಸಮಯದಲ್ಲಿ ಅಗತ್ಯ ಭದ್ರತೆಯನ್ನು ಬಿಎಂಟಿಎಫ್, ಬಿಬಿಎಂಪಿ ಮತ್ತು ಕಂದಾಯ ಇಲಾಖೆಯು ಕೋರಿದಲ್ಲಿ, ಈ ಒತ್ತುವರಿ ತೆರವುಗೊಳಿಸುವ ವ್ಯಾಪ್ತಿಯಲ್ಲಿ ಬರುವ ಸಂಬಂಧಿಸಿದ ಪೋಲೀಸ್ ಠಾಣೆಯ ಠಾಣಾಧಿಕಾರಿಯು (Station House Officer) ಎಲ್ಲಾ ಅಗತ್ಯ ನೆರವು ನೀಡುವುದು.

850 ಕಿ.ಮೀ ವ್ಯಾಪ್ತಿಯ ಪ್ರಾಥಮಿಕ ಮತ್ತು ದ್ವಿತೀಯ ರಾಜಕಾಲುವೆಗಳ ಪ್ರತೀ ಹಂತದ ನಿರ್ವಹಣೆಯ ಸಕ್ಷಮ ಪ್ರಾಧಿಕಾರಗಳನ್ನು ಈ ಆದೇಶದೊಂದಿಗೆ ಲಗತ್ತಿಸಿರುವಂತೆ ನೇಮಿಸಿ ಆದೇಶಿಸಿದೆ.

ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 21–07–2023 ಮತ್ತು 01–08–2023 ರಂದು ನೀಡಿರುವ ದೈನಂದಿನ ಆದೇಶಗಳ ಹಿನ್ನೆಲೆಯಲ್ಲಿ, ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಸರ್ಕಾರಕ್ಕೆ ಸಲ್ಲಿಸಿರುವ ದಿನಾಂಕ: 09–08–2023ರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ನಅಇ 250 ಎಂಎನ್‌ವೈ 2018 (ಭಾಗ–3),**
**ಬೆಂಗಳೂರು, ದಿನಾಂಕ: 28–08–2023 (1).**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಮಾನ್ಯ ಉಚ್ಚ ನ್ಯಾಯಾಲಯವು, ರಿಟ್ ಅರ್ಜಿ ಸಂಖ್ಯೆ: 38401/2014 C/W ರಿಟ್ ಅರ್ಜಿ ಸಂಖ್ಯೆ: 11044/2018 (LB-RES-PIL) ಮತ್ತು ಇತರೆ ಪ್ರಕರಣಗಳಲ್ಲಿ ದಿನಾಂಕ: 21–07–2023 ಮತ್ತು 01–08–2023 ರಂದು ನೀಡಿರುವ ದೈನಂದಿನ ಆದೇಶಗಳ ಹಿನ್ನೆಲೆಯಲ್ಲಿ, ಮುಖ್ಯ ಆಯುಕ್ತರು, ಬಿಬಿಎಂಪಿರವರು ದಿನಾಂಕ: 09–08–2023ರ ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಪ್ರಾಥಮಿಕ ಮತ್ತು ದ್ವಿತೀಯ ರಾಜಕಾಲುವೆಗಳ ಸಂರಕ್ಷಣೆ ಮಾಡುವ ಮತ್ತು ಒತ್ತುವರಿಯನ್ನು ತಡೆಯಲು / ತೆರವುಗೊಳಿಸಲು ಸಂಬಂಧಪಟ್ಟ

ಸಕ್ಷಮ ಪ್ರಾಧಿಕಾರ / ಅಧಿಕೃತಗೊಳಿಸಿದ ಅಧಿಕಾರಿ (Designated Officer) ಗಳನ್ನು ಈ ಆದೇಶದ <u>ಅನುಬಂಧ</u> ದಲ್ಲಿ ನಮೂದಿಸಿರುವಂತೆ ಹಾಗೂ ಈ ಕೆಳಕಂಡಂತೆ ಜವಾಬ್ದಾರಿಗಳನ್ನು ನಿಗಧಿಪಡಿಸಿ, ಈ ಆದೇಶದಲ್ಲಿ ನಮೂದಿಸಿರುವ ಷರತ್ತುಗಳಿಗೊಳಪಟ್ಟು ನೇಮಕ ಮಾಡಿ ಆದೇಶಿಸಿದೆ.

<u>ಪ್ರಾಥಮಿಕ ಮತ್ತು ದ್ವಿತೀಯ ರಾಜಕಾಲುವೆಗಳ ರಕ್ಷಣೆ ಮತ್ತು ಒತ್ತುವರಿ ತೆರವು:</u>

**<u>1. ದೂರು ನೀಡುವ ಪ್ರಾಧಿಕಾರ (Complaining Authority):</u>** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರಾಥಮಿಕ ಮತ್ತು ದ್ವಿತೀಯ ಹಂತದ ರಾಜಕಾಲುವೆಗಳ ಪ್ರತಿಯೊಂದು ನಿರ್ದಿಷ್ಟ ಪರಿಮಿತಿಗೆ ಸಂಬಂಧಿಸಿದಂತೆ, ರಾಜಕಾಲುವೆಗಳ ಎಲ್ಲೆಗಳನ್ನು ರಕ್ಷಿಸುವ ಪ್ರಾಧಿಕಾರ ಇರಬೇಕಾಗಿರುತ್ತದೆ. ಈ ನಿರ್ದಿಷ್ಟ ರಾಜಕಾಲುವೆಗಳ ಪರಿಮಿತಿಯೊಳಗೆ ಕಂಡು ಬರುವ ಯಾವುದೇ ಒತ್ತುವರಿ / ಅತಿಕ್ರಮಣಗಳನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ನಿಯಮ ಕಲಂ 104 ರಡಿ ನೇಮಿಸಲ್ಪಟ್ಟ ಕಂದಾಯ ಪ್ರಾಧಿಕಾರಿಗೆ ವರದಿಸುವುದು ಅಂತಹ ಬಿಬಿಎಂಪಿ ಪ್ರಾಧಿಕಾರದ ಆದ್ಯ ಮತ್ತು ಕಡ್ಡಾಯ ಕರ್ತವ್ಯವಾಗಿರುತ್ತದೆ.

ಬಿಬಿಎಂಪಿ ವ್ಯಾಪ್ತಿಯ ಪ್ರಾಥಮಿಕ ಮತ್ತು ದ್ವಿತೀಯ ರಾಜಕಾಲುವೆಗಳನ್ನು ನಿರ್ವಹಿಸುವ ಬೃಹತ್ ನೀರುಗಾಲುವೆ ವಿಭಾಗದ ಕಾರ್ಯಪಾಲಕ ಅಭಿಯಂತರರು ಆಯಾ ವ್ಯಾಪ್ತಿಯ ಅತಿಕ್ರಮಣಗಳನ್ನು ಸಂಬಂಧಿಸಿದಂತೆ ಮೇಲೆ ತಿಳಿಸಿದ ಕಂದಾಯ ಪ್ರಾಧಿಕಾರಗಳಿಗೆ ದೂರು ಸಲ್ಲಿಸುವ ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.

ಅದರಂತೆ ಆಯಾ ಬೃಹತ್ ನೀರುಗಾಲುವೆ ವ್ಯಾಪ್ತಿಯ ಕಾರ್ಯಪಾಲಕ ಅಭಿಯಂತರರುಗಳನ್ನು ದೂರು ನೀಡುವ ಪ್ರಾಧಿಕಾರಿ ಎಂದು ಈ ಮೂಲಕ ಅಧಿಸೂಚಿಸಿದೆ.

**<u>2. ಆದೇಶವನ್ನು ಹೊರಡಿಸಲು ಸಕ್ಷಮವಾದ ಅಧಿಕಾರಿ (Officer responsible for passing order):</u>** ಕರ್ನಾಟಕ ಭೂ ಕಂದಾಯ ಕಾಯ್ದೆ ಅಧಿನಿಯಮ 1964ರ ನಿಯಮ 104 ರನ್ವಯ ಆಯಾ ಕಂದಾಯ ತಾಲ್ಲೂಕು ವ್ಯಾಪ್ತಿಗಳ ತಹಶೀಲ್ದಾರರು, ಒತ್ತುವರಿ ದೂರು ಸ್ವೀಕರಿಸುವ, ವಿಚಾರಣೆ ನಡೆಸುವ ಮತ್ತು ಆದೇಶ ಹೊರಡಿಸುವ ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.

3. **<u>ಅಳತೆ (ಸರ್ವೆ) ಮತ್ತು ಗಡಿ (ಎಲ್ಲೆ) ಗುರುತಿಸಲು ಸಕ್ಷಮವಾದ ಅಧಿಕಾರಿ / ಪ್ರಾಧಿಕಾರಿ (Officer responsible for Survey and Marking):</u>** ದೂರು ಸ್ವೀಕರಿಸಿದ ತರುವಾಯ ಸಂಬಂಧಿಸಿದ ತಹಶೀಲ್ದಾರನು, ಆ ತಾಲ್ಲೂಕಿನ ವ್ಯಾಪ್ತಿಯ ಭೂ ದಾಖಲೆಗಳ ಸಹಾಯಕ ನಿರ್ದೇಶಕನಿಗೆ ಆ ದೂರಿಗೆ ಸಂಬಂಧಿಸಿದ ಸ್ಪಷ್ಟ ಒತ್ತುವರಿ / ಅತಿಕ್ರಮಣಗಳ ವಿವರಗಳನ್ನೊಳಗೊಂಡ ಒಂದು ಅಳತೆ (ಸರ್ವೆ) ಮತ್ತು ಗಡಿ ಗುರುತು ವಿವರಗಳನ್ನೊಳಗೊಂಡ ವರದಿ ನೀಡಲು ನಿರ್ದೇಶನ ನೀಡುವುದು. ತಹಶೀಲ್ದಾರರವರ ನಿರ್ದೇಶನದ ಮೇರೆಗೆ ಆಯಾ ಕಂದಾಯ ತಾಲ್ಲೂಕು ವ್ಯಾಪ್ತಿಯ ಭೂ ದಾಖಲೆಗಳ ಸಹಾಯಕ ನಿರ್ದೇಶಕರನ್ನು ಅಳತೆ (ಸರ್ವೆ) ಮತ್ತು ಗಡಿ ಗುರುತಿಸುವ ಪ್ರಾಧಿಕಾರಿ / ಅಧಿಕಾರಿಯನ್ನಾಗಿ ಅಧಿಸೂಚಿಸಿದೆ.

**4. ಭೌತಿಕ ಒತ್ತುವರಿ ತೆರವಿಗೆ ಜವಾಬ್ದಾರರದ ಅಧಿಕಾರಿ / ಪ್ರಾಧಿಕಾರ (The Authority responsible for Physical Removal):** ಕರ್ನಾಟಕ ಭೂ ಕಂದಾಯ ಕಾಯಿದೆ ಪ್ರಕರಣ 104 ರನ್ವಯ ಆದೇಶವನ್ನು ಹೊರಡಿಸಿದ ನಂತರ ಸಂಬಂಧಪಟ್ಟ ತಹಶೀಲ್ದಾರರವರು ಬಿಬಿಎಂಪಿಗೆ ಒತ್ತುವರಿಯನ್ನು ತೆರವುಗೊಳಿಸಲು ನಿರ್ದೇಶನ ನೀಡಬೇಕು. ಸದರಿ ಆದೇಶದನ್ವಯ ಬೃಹತ್ ನೀರುಗಾಲುವೆ ಒತ್ತುವರಿಯಾಗಿರುವ ಸ್ಥಳಕ್ಕೆ ಸಂಬಂಧಿಸಿದ ವ್ಯಾಪ್ತಿಯಲ್ಲಿ ಬರುವ ಕಾರ್ಯಪಾಲಕ ಅಭಿಯಂತರರು ಸದರಿ ಒತ್ತುವರಿಯನ್ನು ತೆರವುಗೊಳಿಸಲು ಜವಾಬ್ದಾರರಾಗಿರುತ್ತಾರೆ.(ಕಾರ್ಯಪಾಲಕ ಅಭಿಯಂತರರು ಎಂದರೆ ನೀರುಗಾಲುವೆ ಒತ್ತುವರಿಯಗಿರುವ ವಿಭಾಗದ ಕಾರ್ಯಪಾಲಕ ಅಭಿಯಂತರರಾಗಿದ್ದು, ಬೃಹತ್ ನೀರುಗಾಲುವೆ ವಿಭಾಗದ ಕಾರ್ಯಪಾಲಕ ಅಭಿಯಂತರರುಗಳು ಅಲ್ಲ.) ಈ ಒತ್ತುವರಿಯನ್ನು ತೆರವುಗೊಳಿಸುವ ಸಂದರ್ಭದಲ್ಲಿ ಸರ್ವೆಯರ್‌ನ್ನು ಒಳಗೊಂಡಂತೆ ಕಂದಾಯ ಅಧಿಕಾರಿಗಳು (ಕಂದಾಯ ಇಲಾಖೆಯ) (ಬಿಬಿಎಂಪಿಯ ಕಂದಾಯ ಅಲ್ಲ) ಹಾಜರಿರುವುದನ್ನು ತಹಶೀಲ್ದಾರ್‌ರವರು ಖಚಿತಪಡಿಸಿಕೊಳ್ಳಬೇಕು.

**5. ಕರ್ನಾಟಕ ಭೂ ಕಬಳಿಕೆ ಪ್ರತಿಬಂಧಕ ಕಾಯ್ದೆ 9 ರನ್ವಯ ದೂರು ದಾಖಲಿಸಲು ಸಕ್ಷಮವಾದ ಪ್ರಾಧಿಕಾರ (Authorities to file case under Section 9 of Karnataka Land Grabbin Prohibition Act):**

ಸಂಬಂಧಪಟ್ಟ ತಹಶೀಲ್ದಾರ್‌ರವರು ಕಂದಾಯ ಇಲಾಖೆ ವ್ಯಾಪ್ತಿಗೊಳಪಡುವ ಬೃಹತ್ ನೀರುಗಾಲುವೆ ಸ್ಥಳವನ್ನು ಒತ್ತುವರಿ ಮಾಡಿಕೊಂಡಿರುವುದನ್ನು ತೆರವುಗೊಳಿಸುವ ಸಂಬಂಧ ಆದೇಶ ಹೊರಡಿಸಿರುವುದರಿಂದ ಸದರಿ ತಹಶೀಲ್ದಾರ್‌ರವರೇ ಈ ಸಂಬಂಧ ಕರ್ನಾಟಕ ಭೂ ಕಬಳಿಕೆ ಪ್ರತಿಬಂಧಕ ಕಾಯ್ದೆಯ ಪ್ರಕರಣ-9ರನ್ವಯ ದೂರು ದಾಖಲಿಸಬೇಕು. ಒಂದು ವೇಳೆ, ದೂರು ದಾಖಲಿಸಲು ವಿಫಲರಾದರೆ, ಸದರಿ ಕ್ರಮವನ್ನು ಕರ್ತವ್ಯ ನಿರ್ಲಕ್ಷ್ಯವೆಂದು ಪರಿಗಣಿಸಿ ಶಿಸ್ತು ಕ್ರಮ ಜರುಗಿಸುವುದು.

**6. ಬೃಹತ್ ನೀರುಗಾಲುವೆಗಳ ಒತ್ತುವರಿಯನ್ನು ತೆರವುಗೊಳಿಸಿದ ನಂತರ ಸದರಿ ಕಾಲುವೆಯ ಮೇಲ್ವಿಚಾರಣೆ ಮತ್ತು ಸಂರಕ್ಷಣೆ (Maintenance and preservation of Storm Water Drains boundaries post removal0 of encroachments):**

ಒತ್ತುವರಿ ತೆರವುಗೊಂಡ ನಂತರ ಸದರಿ ಬೃಹತ್ ನೀರುಗಾಲುವೆ ಹಾದುಹೋಗುವ ವ್ಯಾಪ್ತಿಯ ಬೃಹತ್ ನೀರುಗಾಲುವೆ ವಿಭಾಗದ ಕಾರ್ಯಪಾಲಕ ಅಭಿಯಂತರರು ಈ ನೀರುಗಾಲುವೆಯಲ್ಲಿ ಮಳೆ ನೀರು ಸರಾಗವಾಗಿ ಹರಿಯುವಂತೆ ನೋಡಿಕೊಳ್ಳುವ ಮತ್ತು ಅಭಿವೃದ್ಧಿ ಕೈಗೊಂಡು ನಿರ್ವಹಣೆ ಮಾಡುವುದರಿಂದ ಮತ್ತೆ ಯಾವುದೇ ರೀತಿಯ ಒತ್ತುವರಿಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯುಳ್ಳ ಅಧಿಕಾರಿ ಇವರೇ ಆಗಿರುತ್ತಾರೆ.

**7. ರಕ್ಷಣೆ / ಭದ್ರತೆ ನೀಡುವ ಪ್ರಾಧಿಕಾರ (Authority to provide protection):**

ಬೃಹತ್ ನೀರುಗಾಲುವೆ ಒತ್ತುವರಿ ತೆರವುಗೊಳಿಸುವ ಸಮಯದಲ್ಲಿ ಅಗತ್ಯ ಭದ್ರತೆಯನ್ನು ಬಿಎಂಟಿಎಫ್, ಬಿಬಿಎಂಪಿ ಮತ್ತು ಕಂದಾಯ ಇಲಾಖೆಯು ಕೋರಿದಲ್ಲಿ, ಈ ಒತ್ತುವರಿ ತೆರವುಗೊಳಿಸುವ ವ್ಯಾಪ್ತಿಯಲ್ಲಿ ಬರುವ ಸಂಬಂಧಿಸಿದ ಪೋಲೀಸ್ ಠಾಣೆಯ ಠಾಣಾಧಿಕಾರಿಯು (Station House Officer) ಎಲ್ಲಾ ಅಗತ್ಯ ನೆರವು ನೀಡುವುದು.

.8/-

850 ಕಿ.ಮೀ ವ್ಯಾಪ್ತಿಯ ಪ್ರಾಥಮಿಕ ಮತ್ತು ದ್ವಿತೀಯ ರಾಜಕಾಲುವೆಗಳ ಪ್ರತೀ ಹಂತದ ನಿರ್ವಹಣೆಯ ಸಕ್ಷಮ ಪ್ರಾಧಿಕಾರಗಳನ್ನು ಈ ಆದೇಶದೊಂದಿಗೆ ಲಗತ್ತಿಸಿರುವಂತೆ ನೇಮಿಸಿ ಆದೇಶಿಸಿದೆ.

<u>ಷರತ್ತುಗಳು:</u>

1) ಈ ಅಧಿಕೃತಗೊಳಿಸಲಾದ ಅಧಿಕಾರಿಗಳು ಮಾನ್ಯ ಉಚ್ಚ ನ್ಯಾಯಾಲಯವು ಆದೇಶಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಪ್ರಾಥಮಿಕ ಮತ್ತು ದ್ವಿತೀಯ ರಾಜಕಾಲುವೆಗಳ ಸಂರಕ್ಷಣೆ ಮಾಡುವ ಮತ್ತು ಒತ್ತುವರಿಯನ್ನು ತಡೆಯಲು ಕ್ರಮ ಕೈಗೊಳ್ಳತಕ್ಕದ್ದು.

2) ಈ ಅಧಿಕೃತಗೊಳಿಸಲಾದ ಅಧಿಕಾರಿಗಳು ಪ್ರಾಥಮಿಕ ಮತ್ತು ದ್ವಿತೀಯ ರಾಜಕಾಲುವೆಗಳ ಸಂರಕ್ಷಣೆ ಮಾಡುವ ಮತ್ತು ಒತ್ತುವರಿಗಳ ಕುರಿತು ಮೇಲಾಧಿಕಾರಿಗಳಿಗೆ ವರದಿ ಮಾಡತಕ್ಕದ್ದು.

3) ಈ ಅಧಿಕೃತಗೊಳಿಸಲಾದ ಅಧಿಕಾರಿಗಳು ಕೆರೆಗಳು ಮತ್ತು ರಾಜಕಾಲುವೆಗಳ ರಕ್ಷಣೆ ಮತ್ತು ಒತ್ತುವರಿಗಳ ಕುರಿತು ಸಂಬಂಧಪಟ್ಟ ತಹಶೀಲ್ದಾರರುಗಳು ಮಾಡುವ ಆದೇಶವನ್ನು ಕಾರ್ಯರೂಪಕ್ಕೆ ತರಲು ಕ್ರಮವಹಿಸತಕ್ಕದ್ದು.

4) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒರುವ ಕೆರೆಗಳು ಮತ್ತು ಪ್ರಾಥಮಿಕ ಮತ್ತು ದ್ವಿತೀಯ ರಾಜಕಾಲುವೆಗಳಲ್ಲಿ ಉಂಟಾಗುವ / ಉಂಟಾಗಿರುವ ಒತ್ತುವರಿಗಳ ಕುರಿತು ಭೂ ಕಬಳಿಕೆ ನ್ಯಾಯಾಲಯದಲ್ಲಿ (Land Grabbing Court) ಪ್ರಕರಣ ದಾಖಲಿಸತಕ್ಕದ್ದು.

5) ಈ ರೀತಿ ಅಧಿಕೃತಗೊಳಿಸಲಾದ ಅಧಿಕಾರಿಗಳ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಮತ್ತು ಪ್ರಾಥಮಿಕ ಮತ್ತು ದ್ವಿತೀಯ ರಾಜಕಾಲುವೆಗಳ ರಕ್ಷಣೆ ಮತ್ತು ಒತ್ತುವರಿಯನ್ನು ತೆರವುಗೊಳಿಸಲು ವಿಫಲರಾದ ಅಧಿಕಾರಿಗಳ ವಿರುದ್ಧ ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ(ನಡತೆ, ವರ್ಗೀಕರಣ ಮತ್ತು ಮೇಲ್ಮನವಿ) ನಿಯಮಗಳನ್ವಯ ಮತ್ತು Karnataka Municipalities (levy of penalty on jurisdictional officer for failure to prevent unauthorized construction and deviation) Ruels , 2019 ರನ್ವಯ ಶಿಸ್ತು ಕ್ರಮ ಕೈಗೊಳ್ಳತಕ್ಕದ್ದು.

6) ಮೇಲ್ಕಂಡ ಪ್ರಕರಣಗಳನ್ನು ಮಾನ್ಯ ಉಚ್ಚ ನ್ಯಾಯಾಲಯದ ನಿದೇಶನುಸಾರ ಹಾಗೂ ಕರ್ನಾಟಕ ಭೂ ಕಂದಾಯ ಕಾಯಿದೆ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾಯ್ದೆ 2014, ಬಿಬಿಎಂಪಿ ಅಧಿನಿಯಮ 2020 ಮತ್ತು ಚಾಲ್ತಿಯಲ್ಲಿರುವ ನಿಯಮಗಳನುಸಾರ ಕೈಗೊಳ್ಳುವುದು.

7) ಈ ಸಂಬಂಧ ಯಾವುದೇ ಸಂದಿಗ್ಧತೆಗಳು ಉಂಟಾದಲ್ಲಿ / ಕಂಡುಬಂದಲ್ಲಿ ಮುಖ್ಯ ಆಯುಕ್ತರು, ಬಿಬಿಎಂಪಿ ಇವರ ಸ್ಪಷ್ಟನೆಯಂತೆ ಕ್ರಮ ಕೈಗೊಳ್ಳುವುದು.

. . .9/-

8) ಅರ್ಥೈಸುವಿಕೆಯಲ್ಲಿ ಗೊಂದಲಗಳು ಉಂಟಾದಲ್ಲಿ ಅರ್ಥೈಸುವ ಅಧಿಕಾರವು ಸರ್ಕಾರದಲ್ಲಿ ವಿಹಿತವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಕ್ಷ್ಮೀಸಾಗರ್ ವಿನ್ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

<u>ಇವರಿಗೆ:</u>

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ. ಬೆಂಗಳೂರು.
6. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ಬೀಜಭವನ, ಹೆಬ್ಬಾಳ, ಬೆಂಗಳೂರು.
7. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಮುಖ್ಯ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೆರೆಗಳ ವಿಭಾಗ, ಬೆಂಗಳೂರು.
9. ಮುಖ್ಯ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೃಹತ್ ಮಳೆನೀರುಗಾಲುವೆ ವಿಭಾಗ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 38401/2014 C/W ರಿಟ್ ಅರ್ಜಿ ಸಂಖ್ಯೆ: 11044/2018 (LB-RES-PIL) ಮತ್ತು ಇತರೆ ಪ್ರಕರಣಗಳಲ್ಲಿ ದಿನಾಂಕ: 21-07-2023 ಮತ್ತು 01-08-2023 ರಂದು ನೀಡಿರುವ ನಿರ್ದೇಶನಗಳಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಸಂರಕ್ಷಣೆ ಮತ್ತು ಒತ್ತುವರಿಯನ್ನು ತೆರವುಗೊಳಿಸಲು ಸಕ್ಷಮ ಪ್ರಾಧಿಕಾರ / ಗೊತ್ತುಪಡಿಸಿದ ಅಧಿಕಾರಿಗಳನ್ನು ಅಧಿಕೃತಗೊಳಿಸಿ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ:

1. ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 38401/2014 C/W ರಿಟ್ ಅರ್ಜಿ ಸಂಖ್ಯೆ: 11044/2018 (LB-RES-PIL) ರ ಪ್ರಕರಣಗಳಲ್ಲಿ ಮತ್ತು ಇತರೆ ಪ್ರಕರಣಗಳಲ್ಲಿ ದಿನಾಂಕ:21-07-2023 ಮತ್ತು 01-08-2023 ರಂದು ನೀಡಿರುವ ದೈನಂದಿನ ಆದೇಶ / ನಿರ್ದೇಶನ.
2. ಮುಖ್ಯ ಆಯುಕ್ತರು, ಬಿಬಿಎಂಪಿ ರವರ ಪತ್ರ ಸಂಖ್ಯೆ: BBMP/CC/PR/112/2023-24, ದಿನಾಂಕ: 09-08-2023.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಕೆರೆಗಳು ಮತ್ತು ರಾಜಕಾಲುವೆಗಳ ರಕ್ಷಣೆ ಮತ್ತು ಒತ್ತುವರಿಯನ್ನು ತಡೆಯುವ ಬಗ್ಗೆ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ, ರಿಟ್ ಅರ್ಜಿ ಸಂಖ್ಯೆ: 38401/2014 C/W ರಿಟ್ ಅರ್ಜಿ ಸಂಖ್ಯೆ: 11044/2018 (LB-RES-PIL) ರ ಜೆ.ಪಿ. ನಗರ 4ನೇ ಹಂತ, ಡಾಲರ್ಸ್ ಲೇಔಟ್ ರೆಸಿಡೆಂಟ್ಸ್ ಅಸೋಸಿಯೇಷನ್ಸ್ ಮತ್ತು ಇತರರ ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು ಪ್ರಕರಣಗಳನ್ನು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 21-07-2023 ಮತ್ತು ದಿನಾಂಕ: 01-08-2023 ರಂದು ವಿಚಾರಣೆಯನ್ನು ನಡೆಸಿ ಮಾನ್ಯ ಉಚ್ಚ ನ್ಯಾಯಾಲಯವು ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಿರುತ್ತದೆ.

**ದಿನಾಂಕ:01-08-2023 ರಂದು ನೀಡಿರುವ ಆದೇಶದ ಉದ್ಧೃತ ಭಾಗ ಈ ಕೆಳಕಂಡಂತಿದೆ:**

14. Needless to state that the action plan/report as proposed by this court be prepared in coordination with all the stake holders referred to above. For such action plan/report, stake holders may take appropriate assistance from District Lake Protection Authority. We further make it clear that State Government may also take immediate steps for issuing notification for appointment of the Designated officers under the KTCDA Act or BBMP Act as the case may be wherever it is required and not done till date.

ಈ ಹಿನ್ನೆಲೆಯಲ್ಲಿ, ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ: 09-08-2023ರ ಪತ್ರದಲ್ಲಿ ಮುಖ್ಯ ಆಯುಕ್ತರು, ಬಿಬಿಎಂಪಿ ರವರು, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ: 38401/2014 ಮತ್ತು C/W 11044/2018, 20652/2018, 3052/2019, 29107/2019 ಸಿಟಿಜನ್ಸ್ ಆಕ್ಷನ್ ಗ್ರೂಪ್, ಬೆಂಗಳೂರು ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 21-07-2023 ಮತ್ತು 01-08-2023 ರಂದು ನೀಡಿರುವ ದೈನಂದಿನ ಆದೇಶಗಳಲ್ಲಿ ಪಾಲಿಕೆ ವ್ಯಾಪ್ತಿಯ ಕೆರೆಗಳು ಮತ್ತು ಬೃಹತ್ ಮಳೆನೀರುಗಾಲುವೆಗಳನ್ನು / ರಾಜಕಾಲುವೆಗಳನ್ನು ಅತಿಕ್ರಮಣ ಮಾಡುವುದನ್ನು ತಡೆಯಲು ಸಮಗ್ರ ವರದಿಯನ್ನು ಸಿದ್ಧಪಡಿಸುವಂತೆ ಆದೇಶಿಸಿರುತ್ತದೆ ಎಂದು ತಿಳಿಸಿರುತ್ತಾರೆ.

ಅದರಂತೆ, ಬಿಬಿಎಂಪಿ ವತಿಯಿಂದ, 1986ರ ಶ್ರೀ ಲಕ್ಷ್ಮಣರಾವ್ ಸಮಿತಿ ಹಾಗೂ 2011ರ ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್ ಸಮಿತಿಯ ಶಿಫಾರಸ್ಸನ್ನು ಒಳಗೊಂಡಂತೆ EMPRI ಸಂಸ್ಥೆಯ ವೈಜ್ಞಾನಿಕ ವರದಿ ಹಾಗೂ EMPRI ಸಂಸ್ಥೆಯ ವರದಿಗಳನ್ನು ಆಧರಿಸಿ, ಒಂದು ಸಮಗ್ರ ವರದಿಯನ್ನು ಅಫಿಡವಿಟ್ ರೂಪದಲ್ಲಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು. ಮುಂದುವರೆದು, ಸದರಿ ಅಫಿಡವಿಟ್‌ನಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಕೆರೆಗಳು ಮತ್ತು ಮಳೆ ನೀರುಗಾಲುವೆಗಳ ಒತ್ತುವರಿಯನ್ನು ತಡೆಗಟ್ಟಲು KTCDA ಸಂಸ್ಥೆಯು ಸಂಬಂಧಪಟ್ಟ ಕೆರೆಗಳಿಗೆ ಸಂಬಂಧಿಸಿದಂತೆ Designated Officers ಗಳನ್ನು ನೇಮಕ ಮಾಡಲು ದಿನಾಂಕ: 17-10-2022 ರಲ್ಲಿ ಆದೇಶ/ಅಧಿಸೂಚನೆ ಹೊರಡಿಸಲಾಗಿರುವುದನ್ನು ಮಾನ್ಯ ನ್ಯಾಯಾಲಯದ ಗಮನಕ್ಕೆ ತರಲಾಗಿದೆ. ಅಲ್ಲದೇ ಮಳೆನೀರುಗಾಲುವೆಗಳ ಒತ್ತುವರಿ ತೆರವುಗೊಳಿಸುವುದಕ್ಕೆ ಸಂಬಂಧಿಸಿದಂತೆಯೂ ಮಾನ್ಯ ನ್ಯಾಯಾಲಯದ ಗಮನಕ್ಕೆ ತರಲಾಗಿದೆ. ಸದರಿ ಅಫಿಡವಿಟ್ ಅನ್ನು ಮಾನ್ಯ ಉಚ್ಚ ನ್ಯಾಯಾಲಯವು ಒಪ್ಪಿದ್ದು, ದಿನಾಂಕ: 01-08-2023ರ ಆದೇಶದಲ್ಲಿ ಪ್ರಾಥಮಿಕ ಮತ್ತು ದ್ವಿತೀಯ ಮಳೆನೀರುಗಾಲುವೆಗಳ ಒತ್ತುವರಿ ತೆರವುಗೊಳಿಸಲು ಬಿಬಿಎಂಪಿ ಕಾಯ್ದೆ ಹಾಗೂ ಕೆಟಿಸಿಡಿಎ ಕಾಯ್ದೆಯನ್ವಯ ಅಧಿಸೂಚನೆಯನ್ನು ಹೊರಡಿಸುವಂತೆ ಆದೇಶಿಸಿರುತ್ತದೆ ಎಂದು ಮುಖ್ಯ ಆಯುಕ್ತರು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಜವಾಬ್ದಾರಿ / ಅಂಶಗಳಿಗೆ ಸಂಬಂಧಿಸಿದಂತೆ ಆದೇಶ ಹೊರಡಿಸಬೇಕಾಗಿರುತ್ತದೆ ಎಂದು ಮುಖ್ಯ ಆಯುಕ್ತರು ತಿಳಿಸಿರುತ್ತಾರೆ.

1. Officers for Protection and reporting encroachments.
2. Officers responsible to execute an order being passed by the Tahsildar.
3. Officers for filing complaints in the Land Grabbing Court (LGC).

ಮುಂದುವರೆದು, ಈ ರೀತಿ ಅಧಿಕೃತಗೊಳಿಸಲಾಗಿರುವ ಅಧಿಕಾರಿಗಳು ಪಾಲಿಕೆ ವ್ಯಾಪ್ತಿಯ ರಾಜಕಾಲುವೆಗಳು ಮತ್ತು ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲು, ನಿಯಂತ್ರಿಸಲು ತಪ್ಪಿದ್ದಲ್ಲಿ ಸದರಿ

. . .3/-

ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮವನ್ನು ಕೈಗೊಳ್ಳಲು ಉದ್ದೇಶಿಸಲಾಗಿರುವುದನ್ನು ಸಹ ಮಾನ್ಯ ಉಚ್ಚ ನ್ಯಾಯಾಲಯದ ಗಮನಕ್ಕೆ ತರಲಾಗಿದೆ. ಈ ಹಿನ್ನೆಲೆಯಲ್ಲಿ, ಪ್ರಾಥಮಿಕ ಮತ್ತು ದ್ವಿತೀಯ ಹಂತದ ರಾಜಕಾಲುವೆಗಳಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರ / ಅಧಿಕೃತಗೊಳಿಸಿದ ಅಧಿಕಾರಿಗಳ ವಿವರವನ್ನು ಅನುಬಂಧ-1 ರಲ್ಲಿ ಹಾಗೂ ಕೆರೆಗಳ ಸಂರಕ್ಷಣೆ ಮತ್ತು ಕೆರೆ ಭೂಮಿಗಳಿಗೆ ಸಂಬಂಧಿಸಿದಂತೆ ಈ ರೀತಿಯ ಸಕ್ಷಮ ಪ್ರಾಧಿಕಾರ / ಅಧಿಕೃತಗೊಳಿಸಿದ ಅಧಿಕಾರಿಗಳ ವಿವರವನ್ನು ಅನುಬಂಧ-2 ರಲ್ಲಿ ಸಲ್ಲಿಸುತ್ತಾ, ಮಾನ್ಯ ಉಚ್ಚ ನ್ಯಾಯಾಲಯವು ಆದೇಶಿಸಿರುವಂತೆ, ಕೆರೆಗಳು ಮತ್ತು ಪ್ರಾಥಮಿಕ ಮತ್ತು ದ್ವಿತೀಯ ರಾಜಕಾಲುವೆಗಳ ರಕ್ಷಣೆ ಮತ್ತು ಒತ್ತುವರಿ ತೆರವುಗೊಳಿಸಲು ಸಕ್ಷಮ ಪ್ರಾಧಿಕಾರ / ಅಧಿಕೃತಗೊಳಿಸಿದ ಅಧಿಕಾರಿಗಳನ್ನು ನೇಮಕ ಮಾಡಿ ಆದೇಶ ಹೊರಡಿಸುವಂತೆ ಮುಖ್ಯ ಆಯುಕ್ತರು ಬಿಬಿಎಂಪಿ ರವರು ಕೋರಿರುತ್ತಾರೆ.

**<u>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಸಂರಕ್ಷಣೆ ಮತ್ತು ಒತ್ತುವರಿ ತೆರವು ಕುರಿತು:</u>**

ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ (KTCDA) ಯ ನಿಯಮ 10 ರನ್ವಯ ಕೆರೆಗಳ ಸಂರಕ್ಷಣೆ, ಸಮಗ್ರ ಅಭಿವೃದ್ಧಿ ಮತ್ತು ಒತ್ತುವರಿ ತೆರವುಗೊಳಿಸುವುದಕ್ಕೆ ಸಂಬಂಧಿಸಿದಂತೆ ಅಧಿಕೃತಗೊಳಿಸಿದ ಅಧಿಕಾರಿ (Designated officers) ಗಳನ್ನು ನೇಮಕ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವು ದಿನಾಂಕ: 17/20-10-2022 ರಂದು ಪಾಲಿಕೆ ವ್ಯಾಪ್ತಿಯಲ್ಲಿ ಅಸ್ತಿತ್ವದಲ್ಲಿ ಇಲ್ಲದಿರುವ 19 ಕೆರೆಗಳು ಸೇರಿದಂತೆ ಒಟ್ಟು 197 ಕೆರೆಗಳಿಗೆ ಸಂಬಂಧಿಸಿದಂತೆ Designated officers ಗಳನ್ನು ನೇಮಕ ಮಾಡಿ ಅಧಿಸೂಚನೆ ಹೊರಡಿಸಿರುತ್ತದೆ.

ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 01-08-2023 ರಂದು ನೀಡಿರುವ ಆದೇಶದ ಹಿನ್ನೆಲೆಯಲ್ಲಿ, ಸದರಿ ಕೆರೆಗಳ ಸಂರಕ್ಷಣೆ, ಸಮಗ್ರ ಅಭಿವೃದ್ಧಿ ಮತ್ತು ಒತ್ತುವರಿ ತೆರವುಗೊಳಿಸುವುದಕ್ಕೆ ಸಂಬಂಧಿಸಿದಂತೆ ನಿಯೋಜಿತ ಅಧಿಕಾರಿ (Designated officers) ಗಳನ್ನು ನೇಮಕ ಮಾಡಲು ಹಾಗೂ ಸದರಿ ಅಧಿಕಾರಿಗಳಿಗೆ ಜವಾಬ್ದಾರಿಗಳನ್ನು ವಹಿಸಬೇಕಾಗಿರುತ್ತದೆ. ಸದರಿ ಅಧಿಕೃತಗೊಳಿಸಿದ ಅಧಿಕಾರಿ (Designated officers) ಗಳ ಪಾತ್ರ ಮತ್ತು ಜವಾಬ್ದಾರಿಗಳು ಈ ಕೆಳಕಂಡಂತಿವೆ ಎಂದು ಮುಖ್ಯ ಆಯುಕ್ತರು, ಬಿಬಿಎಂಪಿ ರವರು ತಿಳಿಸಿರುತ್ತಾರೆ.

**<u>1. ದೂರು ಸಲ್ಲಿಸುವ ಪ್ರಾಧಿಕಾರ (Complaining Authority):</u>** ಬಿಬಿಎಂಪಿಯ ಕೆರೆ ವಿಭಾಗದ ಕಾರ್ಯಪಾಲಕ ಅಭಿಯಂತರರು (Executive Engineers, (Lakes Division) ರವರು ತಮ್ಮ ವಿಭಾಗದಲ್ಲಿ ಬರುವ ಯಾವುದೇ ಕೆರೆಯು ಅತಿಕ್ರಮಣವಾಗಿರುವ ಬಗ್ಗೆ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ (KTCDA)ಯ ಪ್ರಕರಣ 10 ರನ್ವಯ, ಸಂಬಂಧಿಸಿದ ಅಧಿಕೃತಗೊಳಿಸಿದ

ಅಧಿಕಾರಿಗೆ ದೂರನ್ನು ದಾಖಲಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ದೂರು ಸಲ್ಲಿಸುವ ಪ್ರಾಧಿಕಾರವು, ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕೆರೆಗಳ ಒತ್ತುವರಿಯ ಬಗ್ಗೆ ದೂರು ನೀಡಲು ಜವಾಬ್ದಾರಿಯನ್ನು ಹೊಂದಿದ್ದು, ಸದರಿ ಒತ್ತುವರಿಯ ಬಗ್ಗೆ ದೂರು ದಾಖಲಿಸದೇ ಇದ್ದಲ್ಲಿ, ಈ ಲೋಪವನ್ನು ಸಂಬಂದಪಟ್ಟ ಅಧಿಕಾರಿಗಳ ಕರ್ತವ್ಯ ನಿರ್ಲಕ್ಷ್ಯವೆಂದು ಪರಿಗಣಿಸಲಾಗುತ್ತದೆ.

**<u>2. ಸಕ್ಷಮ ಪ್ರಾಧಿಕಾರ (Designated Officers):</u>** ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆಯನ್ವಯ ಜವಾಬ್ದಾರಿಯನ್ನು ನಿರ್ವಹಿಸಲು ನೇಮಿಸಿದ ಸಕ್ಷಮ ಅಧಿಕಾರಿಯು (Designated Officer), ಸದರಿ ಕೆರೆ ಒತ್ತುವರಿಯನ್ನು ತೆರವುಗೊಳಿಸುವ ಜವಾಬ್ದಾರಿಯುತ ಅಧಿಕಾರಿಯಾಗಿದ್ದು, ಒತ್ತುವರಿ ತೆರವುಗೊಳಿಸಿದ ನಂತರ, ಸದರಿ ಕೆರೆಯ ನಿರ್ವಹಣೆ ಮತ್ತು ಸಂರಕ್ಷಣೆಗಾಗಿ ಬಿಬಿಎಂಪಿಯ ಕೆರೆ ವಿಭಾಗದ ಕಾರ್ಯಪಾಲಕ ಅಭಿಯಂತರರು (Executive Engineers, (Lakes Division) ರವರಿಗೆ ಹಸ್ತಾಂತರಿಸುವುದು.

**<u>3. ಒತ್ತುವರಿಗೊಂಡ ಕೆರೆಯ ಭಾಗದ ಅಳತೆ, ಸರ್ವೆ ಮತ್ತು ಗುರುತಿಸುವಿಕೆಯ ಜವಾಬ್ದಾರಿಯುಳ್ಳ ಅಧಿಕಾರಿ (Officer responsible for surveying and marking of encroachment of relevant lakes):</u>**

ಕೆರೆ ಒತ್ತುವರಿ ಸಂಬಂಧ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ (KTCDA) ಕಾಯ್ದೆಯ ಪ್ರಕರಣ 10(3) ರನ್ವಯ ದೂರು ಸ್ವೀಕರಿಸಿದ ನಂತರ ಈ ಸಂಬಂಧ ಸರ್ವೆ ನಡೆಸಿ ಒತ್ತುವರಿಯನ್ನು ಗುರುತಿಸುವಂತೆ ಸಂಬಂಧಿಸಿದ ನಾಮಾಂಕಿತ ಅಧಿಕಾರಿಯು ನಿರ್ದೇಶನ ನೀಡುವ ತಹಶೀಲ್ದಾರ್ ರವರೇ ಈ ಬಗ್ಗೆ ಜವಾಬ್ದಾರಿಯುತ ಅಧಿಕಾರಿಯಾಗಿರುತ್ತಾರೆ.

**<u>4. ಕರ್ನಾಟಕ ಭೂ ಕಬಳಿಕೆ ಪ್ರತಿಬಂಧಕ ಕಾಯ್ದೆ 2011 ರ ಪ್ರಕರಣ 9 ರನ್ವಯ ಸ್ಥಾಪಿಸಲಾಗಿರುವ ವಿಶೇಷ ನ್ಯಾಯಾಲಯಗಳ ಮುಂದೆ ದೂರು ದಾಖಲಿಸಲು ಜವಾಬ್ದಾರಿಯುಳ್ಳ ಅಧಿಕಾರಿ (Officer responsible for filing complaint before the Special Court u/s 9 of the Karnataka Land Grabbing Prohibition Act 2011):</u>**

ಕೆರೆ ಒತ್ತುವರಿ ಸಂಬಂಧ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ (KTCDA) ಕಾಯ್ದೆಯ ಪ್ರಕರಣ 10 ರನ್ವಯ ಅತಿಕ್ರಮಣ ತೆರವು ಆದೇಶ ಹೊರಡಿಸುವ ಸಕ್ಷಮ ಅಧಿಕಾರಿಯೇ (Designated Officer) ಕರ್ನಾಟಕ ಭೂ ಅತಿಕ್ರಮಣ ಪ್ರತಿಬಂಧಕ ಕಾಯ್ದೆ 2011ರನ್ವಯ ಸ್ಥಾಪಿಸಲಾಗಿರುವ ವಿಶೇಷ ನ್ಯಾಯಾಲಯದಲ್ಲಿ ದೂರು ದಾಖಲಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

ಸಕ್ಷಮ ಅಧಿಕಾರಿ KTCDA ಕಾಯ್ದೆ ಪ್ರಕರಣ 10 ರನ್ವಯ ಅತಿಕ್ರಮಣ ತೆರವು ಆದೇಶ ಹೊರಡಿಸಿದ ತರುವಾಯ ಕರ್ನಾಟಕ ಭೂ ಅತಿಕ್ರಮಣ ಪ್ರತಿಬಂಧಕ ಕಾಯ್ದೆ 2011ರ ಪ್ರಕರಣ 9 ರನ್ವಯ ಸಕ್ಷಮ ಅಧಿಕಾರಿಯು (Designated Officer) ದೂರು ದಾಖಲಿಸುವುದು.

**5. ಅತಿಕ್ರಮಣ ತೆರವುಗೊಳಿಸಿದ ನಂತರ ಕೆರೆಯನ್ನು ಸಂರಕ್ಷಿಸುವ ಜವಾಬ್ದಾರಿಯುಳ್ಳ ಅಧಿಕಾರಿ (The officer responsible for protecting the lake, Post encroachment removal):**

ಒಂದು ಬಾರಿ ಕೆರೆಯ ಒತ್ತುವರಿಯನ್ನು ತೆರವುಗೊಳಿಸಿದ ನಂತರ, ಸದರಿ ಕೆರೆಯನ್ನು ಸಂಬಂಧಿಸಿದ ಕೆರೆ ವಿಭಾಗದ ಕಾರ್ಯಪಾಲಕ ಅಭಿಯಂತರರಿಗೆ ಸಕ್ಷಮ ಪ್ರಾಧಿಕಾರಿಯು (Designated Officer) ಹಸ್ತಾಂತರಿಸಿದ ನಂತರ, ಸದರಿ ಕೆರೆಯ ನಿರ್ವಹಣೆ ಮತ್ತು ಸಂರಕ್ಷಣೆಯ ಜವಾಬ್ದಾರಿಯು ಸಂಬಂಧಿಸಿದ ಕೆರೆ ವಿಭಾಗದ ಕಾರ್ಯಪಾಲಕ ಅಭಿಯಂತರದ್ದಾಗಿರುತ್ತದೆ. ತದನಂತರ, ಉಂಟಾಗುವ ಯಾವುದೇ ಒತ್ತುವರಿಯನ್ನು ಸಂಬಂಧಿಸಿದ ಕಾರ್ಯಪಾಲಕ ಅಭಿಯಂತರರ ತೀವ್ರತರವಾದ ಕರ್ತವ್ಯ ಲೋಪವೆಂದು ಪರಿಗಣಿಸಲಾಗುವುದು.

**6.ಒತ್ತುವರಿ ತೆರವು ಸಮಯದಲ್ಲಿ ಅಗತ್ಯವಾದ ಭದ್ರತೆಯನ್ನು ಒದಗಿಸುವ ಜವಾಬ್ದಾರಿಯುಳ್ಳ ಪ್ರಾಧಿಕಾರ (The authority responsible for providing protection during removal):**

ಬಿಬಿಎಂಪಿ ವ್ಯಾಪ್ತಿಯಲ್ಲಿ ಸರ್ಕಾರಿ ಜಮೀನು/ಜಾಗ ಒತ್ತುವರಿ ತಡೆಗಟ್ಟಲು ಸ್ಥಾಪಿಸಲಾಗಿರುವ ಬಿಎಂಟಿಎಫ್ ಸಂಸ್ಥೆಯು ಒತ್ತುವರಿ ತೆರವುಗೊಳಿಸುವ ಸಂಬಂಧ ಅಗತ್ಯ /ಭದ್ರತೆ ನೆರವು ನೀಡುವುದು. ಆದಾಗ್ಯೂ, ಒತ್ತುವರಿ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ಠಾಣೆಯ ಠಾಣಾಧಿಕಾರಿಯು (Station House Officer) ಒತ್ತುವರಿ ತೆರವುಗೊಳಿಸಲು ಬಿಎಂಟಿಎಫ್ (BMTF) ಸಂಸ್ಥೆಗೆ ಅಗತ್ಯ ನೆರವು ನೀಡತಕ್ಕದ್ದು.

ಈ ಸಂಬಂಧ ಕರ್ತವ್ಯ ನಿರ್ವಹಣೆಯಲ್ಲಿ ಯಾವುದೇ ಲೋಪದೋಷಗಳು ಮೇಲ್ಕಂಡ ಅಧಿಕಾರಿಗಳಲ್ಲಿ ಕಂಡುಬಂದಲ್ಲಿ ಸದರಿ ಕ್ರಮವನ್ನು ತೀವ್ರತರವಾದ ಕರ್ತವ್ಯ ಲೋಪವೆಂದು ಪರಿಗಣಿಸಿ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 21-07-2023 ಮತ್ತು 01-08-2023 ರಂದು ನೀಡಿರುವ ದೈನಂದಿನ ಆದೇಶಗಳ ಹಿನ್ನೆಲೆಯಲ್ಲಿ, ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಸರ್ಕಾರಕ್ಕೆ ಸಲ್ಲಿಸಿರುವ ದಿನಾಂಕ: 09-08-2023ರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ನಅಇ 250 ಎಂಎನ್‌ವೈ 2018 (ಭಾಗ-3),**
**ಬೆಂಗಳೂರು, ದಿನಾಂಕ: 28-08-2023 (2).**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಮಾನ್ಯ ಉಚ್ಚ ನ್ಯಾಯಾಲಯವು, ರಿಟ್ ಅರ್ಜಿ ಸಂಖ್ಯೆ: 38401/2014 C/W ರಿಟ್ ಅರ್ಜಿ ಸಂಖ್ಯೆ: 11044/2018 (LB-RES)PIL ಮತ್ತು ಇತರೆ ಪ್ರಕರಣಗಳಲ್ಲಿ ದಿನಾಂಕ: 21-07-2023 ಮತ್ತು 01-08-2023 ರಂದು ನೀಡಿರುವ ದೈನಂದಿನ ಆದೇಶಗಳ ಹಿನ್ನೆಲೆಯಲ್ಲಿ, ಮುಖ್ಯ ಆಯುಕ್ತರು, ಬಿಬಿಎಂಪಿರವರು ದಿನಾಂಕ: 09-08-2023ರ ಪ್ರಸ್ತಾವನೆಯಲ್ಲಿ

ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಕೆರೆಗಳ ಸಂರಕ್ಷಣೆ ಮಾಡುವ ಮತ್ತು ಒತ್ತುವರಿಯನ್ನು ತಡೆಯಲು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರ / ಅಧಿಕೃತಗೊಳಿಸಿದ ಅಧಿಕಾರಿ (Designated Officer) ಗಳನ್ನು ಈ ಆದೇಶದ ಅನುಬಂಧ ದಲ್ಲಿ ನಮೂದಿಸಿರುವಂತೆ ಹಾಗೂ ಈ ಕೆಳಕಂಡಂತೆ ಜವಾಬ್ದಾರಿಗಳನ್ನು ನಿಗಧಿಪಡಿಸಿ, ಈ ಆದೇಶದಲ್ಲಿ ನಮೂದಿಸಿರುವ ಷರತ್ತುಗಳಿಗೊಳಪಟ್ಟು ನೇಮಕ ಮಾಡಿ ಆದೇಶಿಸಿದೆ.

<u>**1. ದೂರು ಸಲ್ಲಿಸುವ ಪ್ರಾಧಿಕಾರ (Complaining Authority):**</u> ಬಿಬಿಎಂಪಿಯ ಕೆರೆ ವಿಭಾಗದ ಕಾರ್ಯಪಾಲಕ ಅಭಿಯಂತರರು (Executive Engineers, (Lakes Division) ರವರು ತಮ್ಮ ವಿಭಾಗದಲ್ಲಿ ಬರುವ ಯಾವುದೇ ಕೆರೆಯು ಅತಿಕ್ರಮಣವಾಗಿರುವ ಬಗ್ಗೆ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ (KTCDA)ಯ ಪ್ರಕರಣ 10 ರನ್ವಯ, ಸಂಬಂಧಿಸಿದ ಅಧಿಕೃತಗೊಳಿಸಿದ ಅಧಿಕಾರಿಗೆ ದೂರನ್ನು ದಾಖಲಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ದೂರು ಸಲ್ಲಿಸುವ ಪ್ರಾಧಿಕಾರವು, ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕೆರೆಗಳ ಒತ್ತುವರಿಯ ಬಗ್ಗೆ ದೂರು ನೀಡಲು ಜವಾಬ್ದಾರಿಯನ್ನು ಹೊಂದಿದ್ದು, ಸದರಿ ಒತ್ತುವರಿಯ ಬಗ್ಗೆ ದೂರು ದಾಖಲಿಸದೇ ಇದ್ದಲ್ಲಿ, ಈ ಲೋಪವನ್ನು ಸಂಬಂದಪಟ್ಟ ಅಧಿಕಾರಿಗಳ ಕರ್ತವ್ಯ ನಿರ್ಲಕ್ಷ್ಯವೆಂದು ಪರಿಗಣಿಸಲಾಗುತ್ತದೆ.

<u>**2. ಸಕ್ಷಮ ಪ್ರಾಧಿಕಾರ (Designated Officers):**</u> ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆಯನ್ವಯ ಜವಾಬ್ದಾರಿಯನ್ನು ನಿರ್ವಹಿಸಲು ನೇಮಿಸಿದ ಸಕ್ಷಮ ಅಧಿಕಾರಿಯು (Designated Officer), ಸದರಿ ಕೆರೆ ಒತ್ತುವರಿಯನ್ನು ತೆರವುಗೊಳಿಸುವ ಜವಾಬ್ದಾರಿಯುತ ಅಧಿಕಾರಿಯಾಗಿದ್ದು, ಒತ್ತುವರಿ ತೆರವುಗೊಳಿಸಿದ ನಂತರ, ಸದರಿ ಕೆರೆಯ ನಿರ್ವಹಣೆ ಮತ್ತು ಸಂರಕ್ಷಣೆಗಾಗಿ ಬಿಬಿಎಂಪಿಯ ಕೆರೆ ವಿಭಾಗದ ಕಾರ್ಯಪಾಲಕ ಅಭಿಯಂತರರು (Executive Engineers, (Lakes Division) ರವರಿಗೆ ಹಸ್ತಾಂತರಿಸುವುದು.

<u>**3. ಒತ್ತುವರಿಗೊಂಡ ಕೆರೆಯ ಭಾಗದ ಅಳತೆ, ಸರ್ವೆ ಮತ್ತು ಗುರುತಿಸುವಿಕೆಯ ಜವಾಬ್ದಾರಿಯುಳ್ಳ ಅಧಿಕಾರಿ (Officer responsible for surveying and marking of encroachment of relevant lakes):**</u>

ಕೆರೆ ಒತ್ತುವರಿ ಸಂಬಂಧ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ (KTCDA) ಕಾಯ್ದೆಯ ಪ್ರಕರಣ 10(3) ರನ್ವಯ ದೂರು ಸ್ವೀಕರಿಸಿದ ನಂತರ ಈ ಸಂಬಂಧ ಸರ್ವೆ ನಡೆಸಿ ಒತ್ತುವರಿಯನ್ನು ಗುರುತಿಸುವಂತೆ ಸಂಬಂಧಿಸಿದ ನಾಮಾಂಕಿತ ಅಧಿಕಾರಿಯು ನಿರ್ದೇಶನ ನೀಡುವ ತಹಶೀಲ್ದಾರ್ ರವರೇ ಈ ಬಗ್ಗೆ ಜವಾಬ್ದಾರಿಯುತ ಅಧಿಕಾರಿಯಾಗಿರುತ್ತಾರೆ.

. . .7/-

**4. ಕರ್ನಾಟಕ ಭೂ ಕಬಳಿಕೆ ಪ್ರತಿಬಂಧಕ ಕಾಯ್ದೆ 2011 ರ ಪ್ರಕರಣ 9 ರನ್ವಯ ಸ್ಥಾಪಿಸಲಾಗಿರುವ ವಿಶೇಷ ನ್ಯಾಯಾಲಯಗಳ ಮುಂದೆ ದೂರು ದಾಖಲಿಸಲು ಜವಾಬ್ದಾರಿಯುಳ್ಳ ಅಧಿಕಾರಿ (Officer responsible for filing complaint before the Special Court u/s 9 of the Karnataka Land Grabbing Prohibition Act 2011):**

ಕೆರೆ ಒತ್ತುವರಿ ಸಂಬಂಧ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ (KTCDA) ಕಾಯ್ದೆಯ ಪ್ರಕರಣ 10 ರನ್ವಯ ಅತಿಕ್ರಮಣ ತೆರವು ಆದೇಶ ಹೊರಡಿಸುವ ಸಕ್ಷಮ ಅಧಿಕಾರಿಯೇ (Designated Officer) ಕರ್ನಾಟಕ ಭೂ ಅತಿಕ್ರಮಣ ಪ್ರತಿಬಂಧಕ ಕಾಯ್ದೆ 2011ರನ್ವಯ ಸ್ಥಾಪಿಸಲಾಗಿರುವ ವಿಶೇಷ ನ್ಯಾಯಾಲಯದಲ್ಲಿ ದೂರು ದಾಖಲಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

ಸಕ್ಷಮ ಅಧಿಕಾರಿ KTCDA ಕಾಯ್ದೆ ಪ್ರಕರಣ 10 ರನ್ವಯ ಅತಿಕ್ರಮಣ ತೆರವು ಆದೇಶ ಹೊರಡಿಸಿದ ತರುವಾಯ ಕರ್ನಾಟಕ ಭೂ ಅತಿಕ್ರಮಣ ಪ್ರತಿಬಂಧಕ ಕಾಯ್ದೆ 2011ರ ಪ್ರಕರಣ 9 ರನ್ವಯ ಸಕ್ಷಮ ಅಧಿಕಾರಿಯು (Designated Officer) ದೂರು ದಾಖಲಿಸುವುದು.

**5. ಅತಿಕ್ರಮಣ ತೆರವುಗೊಳಿಸಿದ ನಂತರ ಕೆರೆಯನ್ನು ಸಂರಕ್ಷಿಸುವ ಜವಾಬ್ದಾರಿಯುಳ್ಳ ಅಧಿಕಾರಿ (The officer responsible for protecting the lake, Post encroachment removal):**

ಒಂದು ಬಾರಿ ಕೆರೆಯ ಒತ್ತುವರಿಯನ್ನು ತೆರವುಗೊಳಿಸಿದ ನಂತರ, ಸದರಿ ಕೆರೆಯನ್ನು ಸಂಬಂಧಿಸಿದ ಕೆರೆ ವಿಭಾಗದ ಕಾರ್ಯಪಾಲಕ ಅಭಿಯಂತರರಿಗೆ ಸಕ್ಷಮ ಪ್ರಾಧಿಕಾರಿಯು (Designated Officer) ಹಸ್ತಾಂತರಿಸಿದ ನಂತರ, ಸದರಿ ಕೆರೆಯ ನಿರ್ವಹಣೆ ಮತ್ತು ಸಂರಕ್ಷಣೆಯ ಜವಾಬ್ದಾರಿಯು ಸಂಬಂಧಿಸಿದ ಕೆರೆ ವಿಭಾಗದ ಕಾರ್ಯಪಾಲಕ ಅಭಿಯಂತರರದ್ದಾಗಿರುತ್ತದೆ. ತದನಂತರ, ಉಂಟಾಗುವ ಯಾವುದೇ ಒತ್ತುವರಿಯನ್ನು ಸಂಬಂಧಿಸಿದ ಕಾರ್ಯಪಾಲಕ ಅಭಿಯಂತರರ ತೀವ್ರತರವಾದ ಕರ್ತವ್ಯ ಲೋಪವೆಂದು ಪರಿಗಣಿಸಲಾಗುವುದು.

**6.ಒತ್ತುವರಿ ತೆರವು ಸಮಯದಲ್ಲಿ ಅಗತ್ಯವಾದ ಭದ್ರತೆಯನ್ನು ಒದಗಿಸುವ ಜವಾಬ್ದಾರಿಯುಳ್ಳ ಪ್ರಾಧಿಕಾರ (The authority responsible for providing protection during removal):**

ಬಿಬಿಎಂಪಿ ವ್ಯಾಪ್ತಿಯಲ್ಲಿ ಸರ್ಕಾರಿ ಜಮೀನು/ಜಾಗ ಒತ್ತುವರಿ ತಡೆಗಟ್ಟಲು ಸ್ಥಾಪಿಸಲಾಗಿರುವ ಬಿಎಂಟಿಎಫ್ ಸಂಸ್ಥೆಯು ಒತ್ತುವರಿ ತೆರವುಗೊಳಿಸುವ ಸಂಬಂಧ ಅಗತ್ಯ /ಭದ್ರತೆ ನೆರವು ನೀಡುವುದು. ಆದಾಗ್ಯೂ, ಒತ್ತುವರಿ ವ್ಯಾಪ್ತಿಯಲ್ಲಿ ಬರುವ ಪೋಲೀಸ್ ಠಾಣೆಯ ಠಾಣಾಧಿಕಾರಿಯು (Station House Officer) ಒತ್ತುವರಿ ತೆರವುಗೊಳಿಸಲು ಬಿಎಂಟಿಎಫ್ (BMTF) ಸಂಸ್ಥೆಗೆ ಅಗತ್ಯ ನೆರವು ನೀಡತಕ್ಕದ್ದು.

...8/-

ಈ ಸಂಬಂಧ ಕರ್ತವ್ಯ ನಿರ್ವಹಣೆಯಲ್ಲಿ ಯಾವುದೇ ಲೋಪದೋಷಗಳು ಮೇಲ್ಕಂಡ ಅಧಿಕಾರಿಗಳಲ್ಲಿ ಕಂಡುಬಂದಲ್ಲಿ ಸದರಿ ಕ್ರಮವನ್ನು ತೀವ್ರತರವಾದ ಕರ್ತವ್ಯ ಲೋಪವೆಂದು ಪರಿಗಣಿಸಿ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

<u>ಷರತ್ತುಗಳು:</u>

1) ಈ ಅಧಿಕೃತಗೊಳಿಸಲಾದ ಅಧಿಕಾರಿಗಳು ಮಾನ್ಯ ಉಚ್ಚ ನ್ಯಾಯಾಲಯವು ಮೇಲ್ಕಂಡ ಪ್ರಕರಣಗಳಲ್ಲಿ ಆದೇಶಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಕೆರೆಗಳ ಸಂರಕ್ಷಣೆ ಮತ್ತು ಒತ್ತುವರಿಯನ್ನು ತಡೆಯಲು ಕ್ರಮ ಕೈಗೊಳ್ಳತಕ್ಕದ್ದು.

2) ಈ ಅಧಿಕೃತಗೊಳಿಸಲಾದ ಅಧಿಕಾರಿಗಳು ಕೆರೆಗಳ ಸಂರಕ್ಷಣೆ ಮತ್ತು ಒತ್ತುವರಿಗಳ ಕುರಿತು ಮೇಲಾಧಿಕಾರಿಗಳಿಗೆ ವರದಿ ಮಾಡತಕ್ಕದ್ದು.

3) ಈ ಅಧಿಕೃತಗೊಳಿಸಲಾದ ಅಧಿಕಾರಿಗಳು ಕೆರೆಗಳ ಸಂರಕ್ಷಣೆ ಮತ್ತು ಒತ್ತುವರಿಗಳನ್ನು ತೆರವುಗೊಳಿಸಲು ಮತ್ತು ಸಂರಕ್ಷಣೆ ಮಾಡಲು ಸಂಬಂಧಪಟ್ಟ ತಹಶೀಲ್ದಾರರುಗಳು ಮಾಡುವ ಆದೇಶವನ್ನು ಕಾರ್ಯರೂಪಕ್ಕೆ ತರಲು ಕ್ರಮವಹಿಸತಕ್ಕದ್ದು.

4) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕೆರೆಗಳಲ್ಲಿ ಉಂಟಾಗುವ / ಉಂಟಾಗಿರುವ ಒತ್ತುವರಿಗಳ ಕುರಿತು ಭೂ ಕಬಳಿಕೆ ನ್ಯಾಯಾಲಯದಲ್ಲಿ (Land Grabbing Court) ಪ್ರಕರಣ ದಾಖಲಿಸತಕ್ಕದ್ದು.

5) ಈ ರೀತಿ ಅಧಿಕೃತಗೊಳಿಸಲಾದ ಅಧಿಕಾರಿಗಳ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಮತ್ತು ಪ್ರಾಥಮಿಕ ಮತ್ತು ದ್ವಿತೀಯ ರಾಜಕಾಲುವೆಗಳ ರಕ್ಷಣೆ ಮತ್ತು ಒತ್ತುವರಿಯನ್ನು ತೆರವುಗೊಳಿಸಲು ವಿಫಲರಾದ ಅಧಿಕಾರಿಗಳ ವಿರುದ್ಧ ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ(ನಡತೆ, ವರ್ಗೀಕರಣ ಮತ್ತು ಮೇಲ್ಮನವಿ) ನಿಯಮಗಳನ್ವಯ ಮತ್ತು Karnataka Municipalities (levy of penalty on jurisdictional officer for failure to prevent unauthorized construction and deviation) Ruels , 2019 ರನ್ವಯ ಶಿಸ್ತು ಕ್ರಮ ಕೈಗೊಳ್ಳತಕ್ಕದ್ದು.

6) ಮೇಲ್ಕಂಡ ಪ್ರಕರಣಗಳನ್ನು ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನುಸಾರ ಹಾಗೂ ಕರ್ನಾಟಕ ಭೂ ಕಂದಾಯ ಕಾಯಿದೆ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾಯ್ದೆ 2014, ಬಿಬಿಎಂಪಿ ಅಧಿನಿಯಮ 2020 ಮತ್ತು ಚಾಲ್ತಿಯಲ್ಲಿರುವ ನಿಯಮಗಳನುಸಾರ ಕೈಗೊಳ್ಳುವುದು.

7) ಈ ಸಂಬಂಧ ಯಾವುದೇ ಸಂಧಿಗ್ದತೆಗಳು ಉಂಟಾದಲ್ಲಿ / ಕಂಡುಬಂದಲ್ಲಿ ಮುಖ್ಯ ಆಯುಕ್ತರು, ಬಿಬಿಎಂಪಿ ಇವರ ಸ್ಪಷ್ಟನೆಯಂತೆ ಕ್ರಮ ಕೈಗೊಳ್ಳುವುದು.

8) ಅರ್ಥೈಸುವಿಕೆಯಲ್ಲಿ ಗೊಂದಲಗಳು ಉಂಟಾದಲ್ಲಿ ಅರ್ಥೈಸುವ ಅಧಿಕಾರವು ಸರ್ಕಾರದಲ್ಲಿ ವಿಹಿತವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
(ಲಕ್ಷ್ಮೀಸಾಗರ್ ಎನ್.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ. ಬೆಂಗಳೂರು.
6. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ಬೀಜಭವನ, ಹೆಬ್ಬಾಳ, ಬೆಂಗಳೂರು.
7. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಮುಖ್ಯ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೆರೆಗಳ ವಿಭಾಗ, ಬೆಂಗಳೂರು.
9. ಮುಖ್ಯ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೃಹತ್ ಮಳೆನೀರುಗಾಲುವೆ ವಿಭಾಗ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.